ರಾತ್ರಿಯಾದರೆ ತಮ್ಮನ ಕೋಣೆಯಿಂದ ಕೇಳುವ ಪಿಸುಮಾತು, ಕಿಲಕಿಲ ನಗು... ಎಲ್ಲವೂ ನಾಗಕ್ಕನಿಗೆ ಹುಚ್ಚು ಹಿಡಿಸುತ್ತದೆ... ತನ್ನ ತೊಡೆಯ ಮೇಲಿನ ಮಚ್ಚೆಯ ನೆನಪಾಗಿ, ಅಸಹಾಯಕತೆಯ ನಿಟ್ಟುಸಿರುಬಿಟ್ಟು... ಕಣ್ಣೀರಿಟ್ಟು ಕೊನೆಗೆ ಎಲ್ಲದ್ದಕ್ಕೂ ಕಿವುಡಾಗಿ ಮಲಗುತ್ತಾಳೆ ಅವಳು. ಅಂತಹ ನಾಗಕ್ಕನನ್ನು ಇಷ್ಟು ಕಾಲದ ನಂತರ, ಗಂಡೊಬ್ಬ ಅದರಲ್ಲೂ ಸುಂದರಾಂಗನೊಬ್ಬ ಭಯ, ಭಕ್ತಿಗಳನ್ನು ಪಕ್ಕಕ್ಕಿಟ್ಟು ಕಾಮನೆಯ ಕಣ್ಣುಗಳಿಂದ ಸಮೀಪಿಸಲು ಪ್ರಯತ್ನಿಸಿದ್ದು ಅವಳ ಪಾಲಿಗೆ ನಿಧಿ ಸಿಕ್ಕಂತಾಗಿತ್ತು. ಮೈಮೇಲೆ ಬಂಗಾರ ಹೇರಿಕೊಂಡು, ಹೆಂಗಸರ ಮುಂದೆ ದೊಡ್ಡಸ್ತಿಕೆ ತೋರಿಸಿಕೊಳ್ಳುತ್ತಾ, ಪಟ್ಟಾಂಗದಲ್ಲಿ ಮೈ ಮರೆತಿದ್ದ ಕರಿಯಕ್ಕನ ಕಣ್ಣು ತಪ್ಪಿಸಿ, ಅವನೆಲ್ಲಾ ಚರ್ಯೆಗಳಿಗೆ ಪೂರಕವಾಗಿ ಸ್ಪಂದಿಸಿದ್ದಳು ನಾಗಕ್ಕ. ಮನೆ ತುಂಬ ಜನ ಇರುವಾಗ, ಮನಸಾರೆ ಮುಕ್ತವಾಗಿ ಮಾತನಾಡಲು ಆಗುತ್ತಿಲ್ಲವಲ್ಲ ಎಂದು ಪರಿತಪಿಸುತ್ತಿದ್ದ ಈ ಜೀವಗಳ ಪಾಲಿಗೆ ರಾಮಣ್ಣ ವರವಾಗಿ ಬಂದಿದ್ದ. ತನ್ನ ಮನೆಗೂ ಬರುವಂತೆ ರಾಮಣ್ಣ ಕರಿಯಕ್ಕನಿಗೆ ಪುಸಲಾಯಿಸುತ್ತಿದ್ದಾಗ ಮಹೇಶನ ತಲೆಗೆ ಹೊಳೆದಿತ್ತು ಉಪಾಯ. ಅದರಂತೆ ತಾಯಿಯ ಬದಲಿಗೆ ನಾಗಕ್ಕನೇ ರಾಮಣ್ಣನಿಗೆ ಒಪ್ಪಿಗೆ ಕೊಟ್ಟಿದ್ದಳು. ಆ ಉಪಾಯದ ಫಲವೇ ಈ ಭೇಟಿ.

ಕತ್ತಲಾಗತೊಡಗಿತ್ತು, ಆಟವಾಡಿ ಸುಸ್ತಾದ ಮಕ್ಕಳು ಕಾರಂಜಿ ನೋಡಲು ಹೋದ ಜೋಡಿಯ ದಾರಿ ಕಾಯುತ್ತಿದ್ದರು.

"ಪಾರು, ಹೋಗಿ ಕರೆಯಲೇನೆ?"

"ಬೇಡ ಕಣೋ, ನಾಗಕ್ಕನಿಗೆ ಸಿಟ್ಟು ಬಂದರೆ... ಅಯ್ಯಬ್ಬಾ..."

"ಮಹೇಶಣ್ಣ ಇದ್ದಾರಲ್ಲ, ಭಯ ಇಲ್ಲ ಬಿಡು... ಹೋಗಿ ಕರೀತೆ... ಇಲ್ಲೇ ಕೂತಿರು."

ಉದ್ಯಾವನದ ಮೂಲೆ, ಮೂಲೆ ಹುಡುಕಿದರೂ ಚೇತುವಿಗೆ, ಅವರಿಬ್ಬರು ಕಾಣಲಿಲ್ಲ. ಆಟದ ಭರದಲ್ಲಿ, ಬಹಳ ಹೊತ್ತಿನಿಂದ ಉಚ್ಚೆ ಕಟ್ಟಿಕೊಂಡೇ ಇದ್ದ ಅವನಿಂದ ಈಗ ತಡೆದುಕೊಳ್ಳಲಿಕ್ಕಾಗಲಿಲ್ಲ. "ದೇವಸ್ಥಾನದ ಶೌಚಾಲಯದಲ್ಲಿ ಜನ ಜಾಸ್ತಿ. ವಾಚ್‌ಮೆನ್ ಸೂರಣ್ಣನ ಕೋಣೆಯ ಶೌಚಾಲಯಕ್ಕೆ ಹೋಗ್ತೆ, ಹೇಗೂ ಮಹೇಶಣ್ಣನ ದೋಸ್ತಿ ಅಂವ, ನಂಗೆ ಬೈಯುದಿಲ್ಲ" ಎಂದುಕೊಂಡು ಆ ಕಡೆ ನಡೆದ.

ಎರಡೂ ಮೂರು ಸಾರಿ ಜೋರಾಗಿ ಬಡಿದರೂ ಬಾಗಿಲು ತೆರೆಯದಿದ್ದಾಗ, "ಸೂರಣ್ಣ ಗೇಟಿನ ಬಳಿಯಿದ್ದಾರೆ, ಇದು ಯಾರಪ್ಪ ಒಳಗೆ?" ಎಂದುಕೊಂಡು ಬಾಗಿಲ ತೂತಲ್ಲಿ ಇಣುಕಿದ ಚೇತುವಿಗೆ ಅಲ್ಲಿ ಕಂಡರು ಮಹೇಶ, ನಾಗಕ್ಕ.

ಹದಿಮೂರು ಚಿಕ್ಕ ವಯಸ್ಸೇನಲ್ಲ, ಸಿಕ್ಕಾಪಟ್ಟೆ ಸಿನಿಮಾ ಹುಚ್ಚಿನ ಚೇತುವಿಗೆ ತಟ್ಟನೆ ಎಲ್ಲವೂ ಅರಿವಾಯಿತು. ಅಲ್ಲಿಂದ ಕಾಲು ಕಿತ್ತು, ಓಡುತ್ತಿದ್ದವನು ಒಮ್ಮೆಲೆ ಹಿಂದೆ ತಿರುಗಿದಾಗ, ನಿಧಾನಕ್ಕೆ ಬಾಗಿಲು ತೆರೆದು ಓಡುತ್ತಿದ್ದ ಮಹೇಶ ಕಣ್ಣಿಗೆ ಕಂಡಿದ್ದ.

"ಏನಾಯಿತೋ ಚೇತು, ಯಾಕೋ ಹಾವು ನೋಡಿದ್ಯೇನೋ..."

"ಅದು, ಪಾರು..."

ಚೇತುವಿಗೆ ನಾಗಕ್ಕನಿಗೆ ಕಾಯುವುದೋ, ಮನೆಗೆ ಹೋಗುವುದೋ, ಹೋದ ಮೇಲೆ ಮನೆಯವರಿಗೆ ಎಲ್ಲ ಹೇಳುವುದೋ... ಬೇಡವೋ ಎಂಬ ಸಂದಿಗ್ಧ...

ಅಷ್ಟರಲ್ಲಿ ಎದುರು ಬಂದು ನಿಂತಿದ್ದಳು ನಾಗಕ್ಕ.

ಹತ್ತಿರ ಬಂದವಳೇ ಚೇತುವಿನ ಚಡ್ಡಿಯನ್ನು ತುಸು ಮೇಲೆ ಸರಿಸಿ, "ಇಲ್ಲಿ ನೋಡಿದ್ದನ್ನು ಯಾರಲ್ಲಾದರೂ ಬಾಯಿಬಿಟ್ಟರೆ... ಗೊತ್ತಲ್ಲ ನಾನು ಯಾರು ಅಂತ" ಎಂದು ಕೆಂಗಣ್ಣು ಬಿಡುತ್ತಾ ಜೋರಾಗಿ ಗಿಂಡಿದಳು. ಎಳೆಯ ತೊಡೆಯ ಮೇಲೆ, ಉದ್ದ ಉಗುರಿನ ಬಲಿಷ್ಠ ಕೈಗಳು ಗಿಂಡಿದ್ದರ